ನಿಮ್ಮೆಲ್ಲರ ಪರವಾಗಿ ಸ್ಪಷ್ಟವಾಗಿ ಮಂಡನೆ ಮಾಡಿದ್ದೇನೆ. ಆದುದರಿಂದ ಒಟ್ಟಾರೆ ಕೇಳಿರುವಂತಹ ಹಾಸ್ಟೆಲ್‌ಗಳ ಸಂಖ್ಯೆ ಬಂದಾಗ, ನಿಮ್ಮ ಜಿಲ್ಲೆಗಳಿಗೆ ಕೊಡುವಂತಹ ಪ್ರೈಯಾರಿಟಿಯನ್ನು ಸರ್ಕಾರ ಇಟ್ಟುಕೊಂಡಿದೆ, ಅದನ್ನು ಖಂಡಿತ ಮಾಡುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಕರಡಿ ಸಂಗಣ್ಣ:- ಮಾನ್ಯ ಉಪಾಧ್ಯಕ್ಷರೆ,

ಉಪಾಧ್ಯಕ್ಷರು:- ಅವರ ಕಾನ್‌ಸ್ಟಿಟ್ಯೂಯೆನ್ಸಿಗೆ ಸಂಬಂಧಿಸಿದ್ದು ಅದು. ಬೇರೆಯವರಿಗೆ ಅವಕಾಶ ಕೊಡುವುದಿಲ್ಲ.

ಶ್ರೀ ರೇವುನಾಯಕ್ ಬೆಳಮಗಿ:- ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಿರುವ ವಸತಿ ನಿಲಯಗಳೆಷ್ಟು ಎಂದು ಕೇಳಿದ್ದೆ. ಅದಕ್ಕವರು, ಪ್ರಸ್ತುತ ಸಾಲಿನಲ್ಲಿ ಹೊಸದಾಗಿ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸುವ ಉದ್ದೇಶವಿಲ್ಲವೆಂದು ಉತ್ತರಿಸಿದ್ದಾರೆ. ಅದಕ್ಕಾಗಿ ನಾನು ಈ ಮಾತನ್ನು ಏಕೆ ಒತ್ತಿ ಹೇಳುತ್ತಿದ್ದೇನೆಂದರೆ, ನಮ್ಮದು ರಿಸರ್ವ್ ಕ್ಷೇತ್ರ, ಹಿಂದುಳಿದ ಕ್ಷೇತ್ರ. ಕಮಲಾಪುರಕ್ಕೆ ಹೋದರೆ, ಗ್ರಾಮೀಣ ಪ್ರದೇಶಗಳಲ್ಲಿ ತಮ್ಮ ಮಕ್ಕಳನ್ನು ಹಾಸ್ಟೆಲ್ ಇದ್ದರೆ ಶಾಲೆಗೆ ಕಳುಹಿಸುತ್ತಾರೆ. ಹಾಸ್ಟೆಲ್ ಇರಲಿಲ್ಲವೆಂದರೆ ಕೂಲಿಕಾರರು ಕೂಲಿ ಮಾಡುತ್ತಾ ಅಲ್ಲಿಗೆ ಇಲ್ಲಿಗೆ ಬರುತ್ತಾರೆ. ಒಳ್ಳೆಯ ಹುಡುಗರು ಭವಿಷ್ಯವಿದ್ದರೆ, ಹಾಸ್ಟೆಲ್‌ಗೆ ಹೋದ ನಂತರ ಅವರಿಗೆ ಒಳ್ಳೆಯ ವಿದ್ಯೆ ಸಿಕ್ಕಿದರೆ, ಮುಂದೇನೋ ಆಗಬಹುದೆನ್ನುವ ಆಶಯ ನಮ್ಮದು. ಆದಕ್ಕಾಗಿ ಹೆಚ್ಚಿನ ಒತ್ತು ಕೊಟ್ಟು ನೀವು ಎಲ್ಲೆಲ್ಲಿ ರಿಸರ್ವ್ ಕ್ಷೇತ್ರವಿದೆ, ಅಲ್ಲಿ ಹೆಚ್ಚಿನ ಹಾಸ್ಟೆಲ್ ಕೊಡಬೇಕು. ಅಲ್ಪಸಂಖ್ಯಾತರು, ಎಸ್‌ಸಿ:ಎಸ್‌ಟಿಯವರಿಗೆ ಅನುಕೂಲ ಮಾಡಿಕೊಡಬೇಕೆಂದು ವಿನಂತಿಸುತ್ತೇನೆ.

(ಗೊಂದಲ)

ಉಪಾಧ್ಯಕ್ಷರು:- ಮಂತ್ರಿಗಳೇ ಉತ್ತರ ಹೇಳಿ. ಯಾರಿಗೂ ಅವಕಾಶ ಕೊಡುವುದಿಲ್ಲ.

ಶ್ರೀ ಎ. ಕೃಷ್ಣಪ್ಪ:- ಹೊಸ ಉತ್ತರ ಹುಡುಕಲಿಕ್ಕೇನೂ ಇಲ್ಲ. 7 ಜಿಲ್ಲೆಗಳಿಗೆ ಪ್ರತ್ಯೇಕವಾದ ಕಾರ್ಯ ಮಾಡಲು ಸರ್ಕಾರ ಆಸಕ್ತಿ ವಹಿಸಿದೆ. ಡಾ।। ನಂಜುಂಡಪ್ಪನವರ ಶಿಫಾರಸ್ಸು ಏನಿದೆ ಅದರಲ್ಲೇ ಈ ಅಂಶವೂ ಇದೆ ಎಂದ ಮೇಲೆ ಅದೇ ಉತ್ತರ ಅವರಿಗೆ ಕೊಡುತ್ತೇವೆನ್ನುವುದೇ ಉತ್ತರ.

ಉಗಾರ ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿನ ರಸ್ತೆಗಳ ಅಭಿವೃದ್ಧಿ

196 (1443) ಶ್ರೀ ಭರಮಗೌಡ ಅ. ಕಾಗೆ (ಕಾಗವಾಡ): ಮಾನ್ಯ ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಗಾರ್ ಸಕ್ಕರೆ ಕಾರ್ಖಾನೆಯ ಪರಿಮಿತಿಯಲ್ಲಿಯ ರಸ್ತೆಗಳ ಅಭಿವೃದ್ಧಿ ಸಲುವಾಗಿ 2001-02ನೇ ಹಾಗೂ 2002-03ನೇ ಸಾಲಿನ ರೋಡ್ ಸೆಸ್‌ನಲ್ಲಿ ಕೈಗೊಳ್ಳುವ ಕಾಮಗಾರಿಯು ವಿಳಂಬವಾಗಲು ಕಾರಣವೇನು? ಇದುವರೆವಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ?

ಆ) ಸಕ್ಕರೆ ಕಾರ್ಖಾನೆಗಳ ಪರಿಮಿತಿಯಲ್ಲಿನ ರಸ್ತೆಗಳ ದುರಸ್ಥಿಯ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದರೆ, ಇದನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಹಾಗೂ ಸಕ್ಕರೆ ಸಚಿವರು):

ಅ) ಉಗಾರ್ ಸಕ್ಕರೆ ಕಾರ್ಖಾನೆಯ ಪರಿಮಿತಿಯಲ್ಲಿ 2001-02 ಮತ್ತು 2002-03ನೇ ಸಾಲುಗಳಲ್ಲಿ ರಸ್ತೆಗಳ ಅಭಿವೃದ್ಧಿ ಕಾಮಗಾರಿ ವಿಳಂಬವಾಗಿರುವುದಿಲ್ಲ. ಈ ಬಗ್ಗೆ ಸರ್ಕಾರವು

ಹೊರಡಿಸಿರುವ ಮಾರ್ಗಸೂಚಿ ಅನ್ವಯ 2 ವರ್ಷಗಳ ಹಿಂದೆ ಸಕ್ಕರೆ ಕಾರ್ಖಾನೆಗಳಿಂದ ಸಂಗ್ರಹಣೆಯಾದ ರಸ್ತೆ ಕರವನ್ನು ಉಪಯೋಗಿಸಿಕೊಂಡು ರಸ್ತೆಗಳ ಅಭಿವೃದ್ಧಿ ಮಾಡಬೇಕಾಗಿದೆ. ಇದರನ್ವಯ ಈ ಕಾರ್ಖಾನೆಯು ಒಳಗೊಂಡಂತೆ ರಾಜ್ಯದ ಇತರೆ ಸಕ್ಕರೆ ಕಾರ್ಖಾನೆಗಳ ರಸ್ತೆಗಳ ಕ್ರಿಯಾ ಯೋಜನೆಯನ್ನು 1998-99ನೇ ಸಾಲಿನಲ್ಲಿ ಸಂಗ್ರಹಣೆಯಾದ ರಸ್ತೆಕರಕ್ಕನುಗುಣವಾಗಿ 2000-01ನೇ ಸಾಲಿನಲ್ಲಿ ರಸ್ತೆಗಳ ಅಭಿವೃದ್ಧಿಗಾಗಿ ಕ್ರಿಯಾ ಯೋಜನೆಯನ್ನು ಸರ್ಕಾರವು ಅನುಮೋದಿಸಿರುತ್ತದೆ. ಆದರಂತೆ ಈ ಕಾರ್ಖಾನೆಗೆ 2000-01ನೇ ಸಾಲಿನಲ್ಲಿ ರೂ. 1.05 ಕೋಟಿಗಳಷ್ಟು ಹಣವನ್ನು ರಸ್ತೆಗಳ ಅಭಿವೃದ್ಧಿಗಾಗಿ ಸರ್ಕಾರವು ಮಂಜೂರ್ಮಾಡಿ ಬಿಡುಗಡೆ ಮಾಡಿರುತ್ತದೆ. 1999-2000ದ ಸಾಲಿನ ಕಾಮಗಾರಿಗಳನ್ನು ಸರ್ಕಾರದ ದಿನಾಂಕ 30-3-2002ರ ಪರಿಷ್ಕೃತ ಆದೇಶದಂತೆ ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳಿಸಲು ಕ್ರಿಯಾ ಯೋಜನೆಯನ್ನು ಅನುಮೋದಿಸಿದೆ. ಈ ಕಾರ್ಖಾನೆಯಿಂದ 1999-2000ದ ಸಾಲಿನಲ್ಲಿ ರೂ. 1.14 ಕೋಟಿ ರಸ್ತೆ ಕರ ಸಂಗ್ರಹಣೆ ಆಗಿರುತ್ತದೆ. ಅದೇ ರೀತಿ 2000-01ನೇ ಸಾಲಿನಲ್ಲಿ ಈ ಕಾರ್ಖಾನೆಯಿಂದ ರೂ. 1.24 ಕೋಟಿ ರಸ್ತೆ ಕರ ಸಂಗ್ರಹಣೆಯಾಗಿದ್ದು, ಅದನ್ನು ಸಹಾ 2002-03ನೇ ಸಾಲಿನಲ್ಲಿಯೇ ರಸ್ತೆಗಳ ಅಭಿವೃದ್ಧಿಗಾಗಿ ಕ್ರಿಯಾ ಯೋಜನೆಯನ್ನು ಅನುಮೋದಿಸಬೇಕಾಗಿದ್ದು, ಅದು ಪರಿಶೀಲನೆಯಲ್ಲಿರುತ್ತದೆ. 1999-2000ದ ಸಾಲಿನಲ್ಲಿ ಸಂಗ್ರಹಣೆಯಾದ 1.14 ಕೋಟಿ ರೂ.ಗಳನ್ನು 2002-03ನೇ ಸಾಲಿನಲ್ಲಿ ರಸ್ತೆ ಅಭಿವೃದ್ಧಿಪಡಿಸಲು ಕ್ರಿಯಾ ಯೋಜನೆಗಾಗಿ ಅನುಮೋದನೆ ನೀಡಿರುತ್ತದೆ. 2001-02 ಮತ್ತು 2002-03ನೇ ಸಾಲುಗಳಲ್ಲಿ ಸರ್ಕಾರಕ್ಕೆ ಸಂಗ್ರಹಣೆಯಾದ ರಸ್ತೆ ಕರಕ್ಕನುಗುಣವಾಗಿ ಇದರ ವ್ಯಾಪ್ತಿಯಲ್ಲಿನ ರಸ್ತೆಗಳ ಅಭಿವೃದ್ಧಿ ಕ್ರಮವಾಗಿ 2003-04 ಮತ್ತು 2004-05ನೇ ಸಾಲುಗಳಲ್ಲಿ ಕ್ರಿಯಾ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕಾಗಿದೆ. ಸರ್ಕಾರವು ರೂಪಿಸಿರುವ ಆದೇಶಗಳಂತೆ ಮೇಲ್ಕಂಡ ಸಾಲುಗಳ ರಸ್ತೆಗಳ ಕಾಮಗಾರಿಯನ್ನು ಅಭಿವೃದ್ಧಿಪಡಿಸಲು ಇನ್ನೂ ಕಾಲವಕಾಶವಿರುವುದರಿಂದ, ವಿಳಂಬ ಮಾಡಿರುವ ಪ್ರಶ್ನೆ ಉದ್ಭವಿಸಲಾರದು.

ಅ) ಹೌದು.

ಇ) ಈ ಬಗ್ಗೆ ಪ್ರಶ್ನೆ (ಅ)ದಲ್ಲಿನ ವಿವರದಂತೆ ಕ್ರಮವಿಡುವಲ್ಲಿ ಬರುವುದು.

ಶ್ರೀ ಭರಮಗೌಡ ಅ. ಕಾಗೆ:- 1999-2000ದ ಸಾಲಿನಲ್ಲಿ 1 ಕೋಟಿ 14 ಲಕ್ಷ ರೂಪಾಯಿಗಳನ್ನು ಈ ಒಂದು ಸಕ್ಕರೆ ಕಾರ್ಖಾನೆಗೆ ಕೇನ್ ಸೆಸ್ ಏನು ಬಿಡುಗಡೆ ಮಾಡಿದ್ದಾರೆ. ಆ ಕೆಲಸಗಳು ಪೂರ್ತಿಗೊಂಡಿವೆ. ಆದರೆ, ನನ್ನ ಪ್ರಶ್ನೆ ಇರುವುದು, 2000-01, 2001-02ರಲ್ಲಿ ನಮ್ಮ ಷುಗರ್ ಫ್ಯಾಕ್ಟರಿಯಿಂದ ಕೇನ್ ಸೆಸ್ ಕಲೆಕ್ಟ್ ಮಾಡಿದ್ದು ಎಷ್ಟು ಪರ್ಸೆಂಟೇಜ್? ಆ ಹಣ ಎಷ್ಟಿದೆ? ಮತ್ತು ಈಗಾಗಲೇ ಅಲ್ಲಿಯ ಜಿಪಿ ಪ್ರಕಾರ, ಶಾಸಕರು, ಅಲ್ಲಿಯ ವಿಧಾನ ಪರಿಷತ್ತಿನ ಸದಸ್ಯರು, ಅಲ್ಲಿಯ ಸಂಸತ್ ಸದಸ್ಯರು ಮತ್ತು ಸಕ್ಕರೆ ಕಾರ್ಖಾನೆಗಳ ಮ್ಯಾನೇಜಿಂಗ್ ಡೈರೆಕ್ಟರ್ ಇವರನ್ನು ಕರೆಸಿ, ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದ್ದಾರೆ. ಆದರೆ, ಕಳುಹಿಸಿ ಒಂದು ವರ್ಷವಾದರೂ ಏಕೆ ವಿಳಂಬವಾಗುತ್ತಿದೆ? ತುರ್ತಾಗಿ ಕೆಲಸಗಳಿಗೆ ಹಣವನ್ನು ಬಿಡುಗಡೆ ಮಾಡಿ, ಆ ಕೆಲಸವನ್ನು ಮಾಡಿಸಬೇಕೆನ್ನುವ ಮನವಿಯನ್ನು ತಮ್ಮ ಮೂಲಕ ಸರ್ಕಾರಕ್ಕೆ ಮಾಡುತ್ತೇನೆ.

ಶ್ರೀ ಎಂ. ಮಹದೇವ್:- ಮಾನ್ಯ ಉಪಾಧ್ಯಕ್ಷರೆ, 1998-99ನೇ ಸಾಲು ಹಾಗೂ ಅದಕ್ಕಿಂತ ಹಿಂದೆ ಸಂಗ್ರಹವಾದ ಹಣವನ್ನು ಸೇರಿಸಿಕೊಂಡು 2000-01ನೇ ಸಾಲಿನಲ್ಲಿ ಒಟ್ಟು 10

ಕೋಟಿ 36 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ, ಒಟ್ಟು 21 ಸಕ್ಕರೆ ಕಾರ್ಖಾನೆಯ ವ್ಯಾಪ್ತಿಯಲ್ಲಿರುವ 406, 94 ಕಿಲೋ ಮೀಟರ್ ಉದ್ದದ ರಸ್ತೆಗಳನ್ನು ಅಭಿವೃದ್ಧಿಪಡಿಸಲಾಯಿತು. ಆದರಲ್ಲಿ ಶುಗರ್ ಸಕ್ಕರೆ ಕಾರ್ಖಾನೆಯ ಪರಿಮಿತಿ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಕ್ರಿಯಾ ಯೋಜನೆಯನ್ನು ಮಂಜೂರು ಮಾಡಿ, ಬಿಡುಗಡೆ ಮಾಡಲಾದ ಹಣ 1.5 ಕೋಟಿ. ಸರ್ಕಾರವೂ ರೂಪಿಸಿರುವ ಮಾರ್ಗಸೂಚಿಗಳನ್ವಯ 2001-02ನೇ ಸಾಲು, 2002-03ನೇ ಸಾಲುಗಳ ಕಾಮಗಾರಿಗಳನ್ನು ಮಂಜೂರು ಮಾಡಲು ಇನ್ನೂ ಕಾಲಾವಕಾಶ ಇರುವುದರಿಂದ ವಿಳಂಬವಾಗಿರುವುದಿಲ್ಲ. 2001-02ರಲ್ಲಿ ಸಂಗ್ರಹವಾದ ಕರದ ಬಗ್ಗೆ, 2003-04ರಲ್ಲಿ ಮತ್ತು 2002-03ರಲ್ಲಿ ಸಂಗ್ರಹವಾದ ಹಣದ ಬಗ್ಗೆ 2004-05ರಲ್ಲಿ ಕ್ರಿಯಾ ಯೋಜನೆಯನ್ನು ಪರಿಶೀಲನೆಗೆ ಕೈಗೆತ್ತಿಕೊಳ್ಳಲಾಗುವುದು. ಇದಕ್ಕೋಸ್ಕರ ಒಂದು ಸಮಿತಿಯನ್ನು ರಚಿಸಲಾಗಿದೆ. ಆರ್ಥಿಕ ಇಲಾಖೆಯು ದಿನಾಂಕ 30-3-02ರ ಮಾರ್ಗ ಸೂಚಿಯನ್ವಯ ಅಭಿವೃದ್ಧಿ ಕೆಲಸಗಳಿಗೆ ಕೈಗೆತ್ತಿಕೊಳ್ಳಬೇಕಾದ ರಸ್ತೆಗಳನ್ನು ಆಯ್ಕೆ ಮಾಡಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸ್ಥಳೀಯ ವಿಧಾನ ಸಭಾ ಸದಸ್ಯರು, ವಿಧಾನ ಪರಿಷತ್ ಸದಸ್ಯರು, ಲೋಕೋಪಯೋಗಿ ಇಲಾಖಾ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಹಾಗೂ ಸಕ್ಕರೆ ಕಾರ್ಖಾನೆಯ ಪ್ರತಿ ನಿಧಿಗಳನ್ನೊಳಗೊಂಡ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯು ಕಾಮಗಾರಿಗಳನ್ನು ಆಯ್ಕೆ ಮಾಡುತ್ತದೆ. ಸದರಿ ಸಮಿತಿಯು ಆಯ್ಕೆ ಮಾಡಿದ ಕಾಮಗಾರಿಗಳನ್ನು ಒಳಗೊಂಡ ಕ್ರಿಯಾ ಯೋಜನೆಯನ್ನು ಮಂಜೂರು ಮಾಡಲು ಕಬ್ಬು ಅಭಿವೃದ್ಧಿ ಆಯುಕ್ತರು ಹಾಗೂ ಸಕ್ಕರೆ ನಿರ್ದೇಶಕರು, ನೋಡಲ್ ಆಫೀಸರ್ ಆಗಿರುತ್ತಾರೆ. 10 ಪರ್ಸೆಂಟ್ ಸೆಸ್ ಅನ್ನು ನಾವು ಕಲೆಕ್ಟ್ ಮಾಡುತ್ತಿದ್ದೇವೆ.

ಶ್ರೀ ಭರಮಗೌಡ ಅ. ಕಾಗೆ:- ಅಧಿಕಾರಿಗಳು ತಪ್ಪು ಮಾಹಿತಿ ಕೊಟ್ಟಿದ್ದಾರೆಂಬುದನ್ನು ಸಚಿವರ ಗಮನಕ್ಕೆ ತರುತ್ತೇನೆ. 2000-01, 2001-02ಕ್ಕೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿದ್ದೇವೆ ಎಂದು ಹೇಳುತ್ತಿದ್ದೀರಿ. ಆ ಕೆಲಸಗಳಿಗೇಕೆ ವಿಳಂಬವಾಗುತ್ತಿದೆ? ನೀವು 2003-04, 2004-05ರಲ್ಲಿ ನಾವು ಆ ಕೆಲಸಗಳನ್ನು ಕೈಗೆತ್ತಿಕೊಳ್ಳುತ್ತೇವೆಂದಿರಿ. ಆ ಪ್ರಶ್ನೆಯಲ್ಲ. ಹಿಂದೆ ನಮ್ಮ ಕೇನ್ ಸೆಸ್ ಕಲೆಕ್ಟ್ ಮಾಡಿದ್ದನ್ನು ಕೊಡಲು ವಿಳಂಬವೇಕೆ? ಅದನ್ನು ನಾನು ಕೇಳುತ್ತಿರುವುದು? ಈಗಾಗಲೇ ಒಂದು ಪ್ರಪೋಸಲ್ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಬಂದಿದೆ. ಮಂಜೂರಾತಿ ಕೊಡಬೇಕಾದ ಕೆಲಸಗಳಿಗೆ, ದುಡ್ಡು ಯಾವಾಗ ಬೇಕಾದರೂ ಬಿಡುಗಡೆ ಮಾಡಿ, ತುಂಬಾ ಪ್ರೋಸಸ್‌ಗಳಿವೆ. ಆದರೆ ನೀವು ಅನುಮೋದನೆ ಕೊಟ್ಟರೆ ನಮಗೆ ಅಲ್ಲಿನ ಕೆಲಸಗಳನ್ನು ಅಭಿವೃದ್ಧಿ ಮಾಡಲು ಒಳ್ಳೆಯದಾಗುತ್ತದೆಂದು ತಮ್ಮ ಮೂಲಕ ಸಚಿವರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಎಂ. ಮಹದೇವ್:- ಕ್ರಿಯಾ ಯೋಜನೆ ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ. ಅನುಮೋದನೆ ಬಂದ ತಕ್ಷಣ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲು ಪ್ರಯತ್ನಿಸುತ್ತೇನೆ.

ಶ್ರೀ ಭರಮಗೌಡ ಅ. ಕಾಗೆ:- ಅನುಮೋದನೆ ಬಂದಿದೆ.

ಶ್ರೀ ಎಂ. ಮಹದೇವ್:- ಮಾಡುತ್ತೇನೆ.

ಕರ್ನಾಟಕ ಸಾಬೂನು ಮತ್ತು ಮಾರ್ಜಕ ಕಾರ್ಖಾನೆ ಖಾಸಗೀಕರಣ

198 (1414) ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ): ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?